ಕ್ರಿಮಿನಲ್.ಮಿಸ್ಲೇನಿಯಸ್.ನಂ.114/2016

ಆರ್.ಡಬ್ಲ್ಯೂ-1. ವಿಶ್ವನಾಥ ತಂದೆ ಭೀಮಶಾ ಸಾ. ಹಿತ್ತಲಶಿರೂರ

**ಸಾಕ್ಷಿಯನ್ನು ಇಂದು ದಿನಾಂಕಃ 05.01.2022 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ ಎದುರುದಾರ ಪರ ಶ್ರೀ ಎ.ಸಿ.ಟಿ. ವಕೀಲರಿಂದ**

1 ನೇ ಅರ್ಜಿದಾರಳು ನನ್ನ ಹೆಂಡತಿ. 01.05.2002 ರಲ್ಲಿ ನನ್ನ ಮತ್ತು 1 ನೇ ಅರ್ಜಿದಾರಳ ಮದುವೆ ಧುತ್ತರಗಾಂವ ಗ್ರಾಮದಲ್ಲಿ ಆಗಿದೆ. ಒಂದು ವರ್ಷದ ವರೆಗೆ ಹಿತ್ತಲಶಿರೂರ ಗ್ರಾಮದಲ್ಲಿ ನಾನು ನನ್ನ ಹೆಂಡತಿ ವಾಸವಾಗಿದ್ದೆವು. ಒಂದು ವರ್ಷದ ನಂತರ ಆಕೆಯ ಅಣ್ಣ ತಮ್ಮಂದಿರು ಇಲ್ಲಿ ಯಾವುದೇ ಕೆಲಸ ಇಲ್ಲ ಪುಣೆಗೆ ಹೋಗೋಣ ಎಂದು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಕೂಲಿ ಕೆಲಸ ಮಾಡಿದೆ. ನಾನು ಅಲ್ಲಿ ಕೂಲಿ ಕೆಲಸ ಮಾಡುವಾಗ 1 ನೇ ಅರ್ಜಿದಾರಳು ಸಂತೋಷ ಮೇಸ್ತ್ರಿ ಎಂಬುವವನೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಳು. ನಾನು ಅದನ್ನು ಕಣ್ಣಾರೆ ಕಂಡು ಮನೆಗೆ ಬಂದು ಜಗಳ ತೆಗೆದೆ. ಆಕೆಯ ಅಣ್ಣ ತಮ್ಮಂದಿರು ನನಗೆ ಸಮಾಧಾನ ಮಾಡಿದರು. ಒಂದು ವೇಳೆ ಆಕೆ ಹಾಗೆ ಮಾಡಿದಲ್ಲಿ ನಾವು ಆಕೆಗೆ ಬುದ್ಧಿ ಹೇಳುತ್ತೇವೆ ಎಂದು ಸಮಾಧಾನ ಮಾಡಿದರು. ರಾತ್ರಿ 2.00 ಗಂಟೆಗೆ ಹೆಣ ಸುಡುವ ಸ್ಮಶಾನದಲ್ಲಿ ಹೋಗಿ ಮಲಗಿಕೊಂಡೆ. ಅವರೆಲ್ಲ ನನ್ನನ್ನು ಕರೆದುಕೊಂಡು ಹೋದರು. ನಾವು ಆಗ ಧುತ್ತರಗಾಂವದಲ್ಲಿ ಇದ್ದೆವು. ಮದುವೆ ಆದ 4 ವರ್ಷಗಳ ನಂತರ 2 ನೇ ಅರ್ಜಿದಾರಳು ಹುಟ್ಟಿದಳು. ಮಗಳು ಹುಟ್ಟಿದ ನಂತರ 2 ವರ್ಷಗಳ ಕಾಲ ಚೆನ್ನಾಗಿದ್ದೆವು. ನಂತರ ಊರಲ್ಲಿ ಕೂಡ ಆಕೆ ಒಂದು ಸಂಬಂಧ ಇಟ್ಟುಕೊಂಡಳು. ನಂತರ ನಾನು ನಮ್ಮ ಊರಾದ ಹಿತ್ತಲಶಿರೂರಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಎರಡು ವರ್ಷಗಳ ಕಾಲ ಇದ್ದೆವು. ನಾನು ಹಿತ್ತಲಶಿರೂರದಲ್ಲಿಯೇ ಇರುತ್ತೇನೆ, ನೀನು ಕೆಲಸ ಮಾಡಲು ಹೋಗು ಎಂದು ಧುತ್ತರಗಾಂವಕ್ಕೆ ಕಳಿಸಿದಳು. ನಾನು 2-3 ದಿವಸಕ್ಕೆ ಹೋಗಿ ಬಂದು ಮಾಡುತ್ತಿದ್ದೆ. ಹಿತ್ತಲಶಿರೂರದಲ್ಲಿ ಆಕೆ ಶಾಮರಾಯ ಬಾಬುರಾವ ಮಾಡಿಯಾಳ ರವರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಳು. ಆಕೆ ಅಣ್ಣ ತಮ್ಮಂದಿರಿಗೆ ಮತ್ತು ಊರ ಜನರಿಗೆ ಈ ಬಗ್ಗೆ ಗೊತ್ತಾಯಿತು. ನನಗೆ ನನ್ನ ಅಣ್ಣ ತಮ್ಮಂದಿರು ಊರಿಗೆ ಬಾ ಎಂದು ಕರೆದರು. ನಾನು ಊರಿಗೆ ಹೋದ ನಂತರ ಆಕೆ ನನಗೂ ಮತ್ತು ನನ್ನ ಅಣ್ಣ ತಮ್ಮಂದಿರಿಗು ಜಗಳ ಹಚ್ಚಿದಳು. ನೀ ಇರದಿದ್ದಾಗ ಅವರು ನನಗೆ ಹೊಡೆ ಬಡೆ ಮಾಡುತ್ತಾರೆ ಎಂದು ಜಗಳ ಹಚ್ಚಿದಳು, ನಮ್ಮ ಅಣ್ಣ ತಮ್ಮಂದಿರ ಮನೆಗೆ ನಾನು ಹೋಗದಂತೆ ಅವರು ನಮ್ಮ ಮನೆಗೆ ಬರದಂತೆ ಮಾಡಿದಳು. ನಾನು ಕೂಲಿ ಕೆಲಸ ಮಾಡುತ್ತಾ ಊರಲ್ಲಿ ಇರುತ್ತಿದ್ದೆ. ಒಂದು ದಿನ ನಾನು ಹೊಲಕ್ಕೆ ಹೋದೆ. ಆಕೆ ನಮ್ಮ ಹೊಲದಲ್ಲೂ ಇರಲಿಲ್ಲ, ಶಾಮರಾಯನ ಹೊಲದಲ್ಲೂ ಇರಲಿಲ್ಲ, ನಾನು ಹುಡಕಾಡಿದೆ. ಆಕೆ ಕಬ್ಬಿನ ಗದ್ದೆಯಲ್ಲಿ ಇರುತ್ತಾಳೆ ಎಂದು ಜನ ಹೇಳಿದರು. ಸುತ್ತಮುತ್ತಲೂ ಕಬ್ಬು ಇತ್ತು, ನಡುವೆ ಬಯಲು ಮಾಡಿದರು. ನಾನು ಅಲ್ಲಿ ಹೋಗಿ ನೋಡಿದಾಗ ಅವಳು ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಳು. ನಾನು ಇಲ್ಲಿ ಗದ್ದಲ ಮಾಡಿದಲ್ಲಿ ನನಗೆ ಹೊಡೆಯಬಹುದು ಎಂದು ನಾನು ಯಾವುದೇ ಗದ್ದಲ ಮಾಡದೇ ವಾಪಸ್ಸು ಬಂದೆ. ಅವರಕ್ಕಿಂತ ಮುಂಚೆ ನಾನು ಮನೆಗೆ ಬಂದೆ. ನಂತರ ನನ್ನ ಹೆಂಡತಿ ಬಂದಳು, ತಡ ಮಾಡಿದ್ದು ಯಾಕೆ ಎಂದು ಕೇಳಿದಾಗ, ಆಕಳು ಕಳೆದಿತ್ತು ಹಾಗಾಗಿ ತಡವಾಯಿತು ಎಂದು ಹೇಳಿದಳು. ಆಕೆಯ ಅಣ್ಣ ಒಂದು ಸಲ ರುಜುವಾತು ಮಾಡಲು ಕೇಳಿದ್ದ, ಹಾಗಾಗಿ ನಾನು ಆಕೆಯ ಮೊಬೈಲನಲ್ಲಿಯೇ ರೆಕಾರ್ಡಿಂಗ್ ಆಪ್ಷನ್ ಪ್ರಾರಂಬಿಸಿದ್ದೆ. 3-4 ದಿವಸಗಳ ನಂತರ ಅದರಲ್ಲಿ ರೆಕಾರ್ಡ ಆಗಿತ್ತು. ಒಂದು ದಿನ ರಾತ್ರಿ ಆತ ಮನೆಗೆ ಬಂದಿದ್ದ. ಆತನ್ನು ನಾನು ಹಿಡಿದೆ. ನನ್ನನ್ನು ನೂಕಿಸಿಕೊಟ್ಟು ಓಡಿ

ಹೋಗಿದ್ದ. ನನ್ನ ಹೆಂಡತಿ, ಆತ ಕಾಟಕ ಜನಾಂಗದವನು ಆತನ ಬಳಿ ಬಂದೂಕು ಇದೆ, ಆತನಿಗೆ ಹೇಳಿ ನಿನಗೆ ಖಲಾಸ ಮಾಡಿಸುತ್ತೇನೆ ಎಂದು ಹೇಳಿದಳು. ಇದಾದ ನಂತರ ನನ್ನ ಹೆಂಡತಿಗೆ ನಾನು ಇಂತಹ ಅನೈತಿಕ ಸಂಬಂಧ ಇಟ್ಟುಕೊಳ್ಳಬೇಡ ಎಂದು ಕೇಳಿಕೊಂಡೆ. ನಾನು ಮಾಡಬಾರದೇನು ಮಾಡಿಲ್ಲ, ನೀವು ಸುಮ್ಮನೆ ಇರು ಎಂದು ಹೇಳಿದಳು. ಅದಾದ ನಂತರ ನಾನು ಅವಳ ತವರು ಮನೆಯವರಿಗೆ ಫೋನ್ ಮಾಡಿ ಕರೆಯಿಸಿದೆ. ಆಕೆಯ ಅಣ್ಣ ತಮ್ಮಂದಿರು ಬರಲಿಲ್ಲ, ಆಕೆಯ ಕಾಕಾನ ಮಕ್ಕಳು ಬಂದಳು. ಅವರು ಇನ್ನು ಮುಂದೆ ಹಾಗೆ ಆಗುವುದಿಲ್ಲ ಎಂದು ಸಮಾಧಾನ ಮಾಡಿದರು. ಆಕೆಯ ಸಂಬಾಷಣೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅದಾದ ನಂತರ 15 ದಿವಸಗಳ ಕಾಲ ನಾನು ಸುಮ್ಮನಿದ್ದೆ, ಆದರೂ ಆಕೆ ಮತ್ತೊಂದು ಸಲ ಹಣಾದಿಯಲ್ಲಿ ಲೈಂಗಿಕ ಕ್ರಿಯೆ ನಡೆಸಿರುತ್ತಾಳೆ. ಹೀಗೆ ಮನಸ್ತಾಪ ಬಂದು ಜಗಳ ನಡೆಯಿತು, ಆಗ ಫೋನ ಮಾಡಿ ಆಕೆಯ ಅಣ್ಣನನ್ನು ಕರೆಯಿಸಿದೆ. ಆಕೆಯ ಅಣ್ಣ ಬಂದು ಆಕೆಯನ್ನು ತವರು ಮನೆಗೆ ಕರೆದುಕೊಂಡು ಹೋದ. ಪಂಚಾಯತಿ ಮಾಡಿದರೂ ಸಹ ಆಕೆ ತನ್ನ ಚಾಳಿ ಬಿಡಲಿಲ್ಲ. ಠಾಣೆಗೆ ಬಂದು ದೂರು ಕೊಟ್ಟು ಹೋದರು. ಪಿ.ಎಸ್.ಐ.ರವರು ಬುದ್ದಿ ಹೇಳಿ ಪಂಚಾಯತಿಗೆ ಕರೆಯಿಸಿದರು. ನಿಂಬರ್ಗಾ ಶರಣಬಸವೇಶ್ವರ ದೇವಸ್ಥಾನದಲ್ಲಿ ಪಂಚಾಯತಿ ಆಯಿತು. ಪಂಚಾಯತಿಯಲ್ಲಿ ನಮ್ಮಿಬ್ಬರಿಗೂ ಒಪ್ಪಿಗೆ ಆಗಲಿಲ್ಲ, ಹಾಗಾಗಿ ಆಕೆ ದೂರು ಕೊಟ್ಟಳು. ನನ್ನ ಮೇಲೆ, ನನ್ನ ಅಣ್ಣ, ಅತ್ತಿಗೆ ಮೇಲೆ ಸುಳ್ಳು ದೂರನ್ನು ದಾಖಲಿಸಿದರು. ನನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ಶಾಮರಾಯ ಆಕೆಗೆ ಒಂದು ಮನೆ ಮಾಡಿ ಅಫಜಲಪೂರದಲ್ಲಿ ಒಂದುವರೆ ವರ್ಷಗಳ ಕಾಲ ಆಕೆಯನ್ನು ಇಟ್ಟಿದ್ದ. ನಾನು ಹಿತ್ತಲಶಿರೂರದಿಂದ ಬೆಟ್ಟದ ಕಡೆಗೆ ಹೋಗುತ್ತಿದೆ, ಆಗ ನನ್ನ ಹೆಂಡತಿ ಮತ್ತು ಶಾಮರಾಯ ಗಾಡಿಯ ಮೇಲೆ ಕುಳಿತುಕೊಂಡು ನನ್ನ ಮೇಲೆ ಗಾಡಿ ಹಾಯಿಸಲು ಪ್ರಯತ್ನಿಸಿದರು. ಇಬ್ಬರೂ ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದರು, ನಾನು ಯಾರೋ ದರ್ಗಾಕ್ಕೆ ಬಂದಿರಬಹುದು ಎಂದು ಕೊಂಡು, ಏಕೆ ಗಾಡಿಯನ್ನು ಮೈಮೇಲ ಹಾಯಿಸುತ್ತಿದ್ದೀರಿ ಎಂದು ಕೇಳಿದೆ. ಆಗ ಆತ ರಂಡಿ ಮಗನೇ ಈಕೆಯನ್ನು ಇಟ್ಟುಕೊಳ್ಳಲಿಲ್ಲ ಎಂದರೆ ನಿನ್ನನ್ನು ಖಲಾಸ ಮಾಡುತ್ತೇನೆ ಎಂದು ಪಿಸ್ತೂಲು ತೋರಿಸಿದ. ಈ ಬಗ್ಗೆ ನಾನು ಠಾಣೆಗೆ ದೂರನ್ನು ಕೊಟ್ಟಿದ್ದೆ. ಅದಾದ ನಂತರ ಆಕೆಗೂ ಮತ್ತು ಶಾಮರಾಯನಿಗೂ ಜಗಳವಾಗಿ ಮತ್ತೇ ಧುತ್ತರಗಾಂವಕ್ಕೆ ಬಂದಿರುತ್ತಾಳೆ. ಅಲ್ಲಿ ಆಕೆ ತನ್ನ ತಾಯಿಯ ಮೂಲಕ ಅಣ್ಣ ತಮ್ಮಂದಿರಿಂದ ಹೊಲ ಪಡೆದು ಹೊಲ ಬೇರೆಯವರಿಗೆ ಹಚ್ಚಿ ಒಂದು ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತಾಳೆ. ಅದಾದ ನಂತರ ಒಂದು ಸಲ ನನಗೆ ಫೋನ ಮಾಡಿದಳು, ನನ್ನ ಅಣ್ಣನ ಮಕ್ಕಳಿಗೆ ಸರಕಾರಿ ಕೆಲಸವಾಗುತ್ತಿದೆ ಎಂದು ಗೊತ್ತಾಗಿ ಅವರ ಮೇಲೆ ಕೇಸ್ ಮಾಡಿದಲ್ಲಿ ಅವರ ಕೆಲಸ ಹೋಗುತ್ತದೆ ಎಂದು ತಿಳಿದು ದೂರು ನೀಡಿದಳು.

( ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಎದುರುದಾರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ.ಆಳಂದ.